

ಹೆಸರಾಗಿದ್ದ ಯುವಕನಿಗೆ ಮದುವೆ ಮಾಡಿಕೊಟ್ಟಿದ್ದ. ಮಗಳು ಕೃಷಿಕುಟುಂಬಕ್ಕೆ ಸೇರಿ ಅನ್ನದಾತನ ಅನನ್ಯ ಕಾಯಕದಲ್ಲಿ ಕೈಜೋಡಿಸಲಿ ಎನ್ನುವುದು ಬಸವರಾಜಪ್ಪನ ಬಲವಾದ ಆಸೆಯಾಗಿತ್ತು. ಅವನ ಆಸೆಗೆ ಇಂಬುಕೊಡುವಂತೆ ಕೃಷಿಕುಟುಂಬದ ಸಂಬಂಧ ಬಂದದ್ದೇ ವಿಳಂಬ ಮಾಡದೇ ಖುಷಿಯಿಂದ ಮದುವೆ ಮಾಡಿದ್ದ. ಇದ್ದೊಬ್ಬ ಮಗನ ತಲೆಗೆ ವಿದ್ಯೆ ಹತ್ತದೆ ಮ್ಯಾಟ್ರಿಕ್ ಫೇಲಾದಾಗ ತನ್ನೊಂದಿಗೆ ಹೊಲದ ಕೆಲಸದಲ್ಲಿ ಜೊತೆಯಾಗಿಸಿ ಕೊಂಡಿದ್ದ. ಊರಿನಲ್ಲಿ ಹೆಚ್ಚಿನ ಕೃಷಿಕರು ತಮ್ಮ